No. of Printed Pages : **6**

**7964**

*Register Number* | | | | | | |

# Language – Part I – KANNADA – Paper II

(Non-detail Text, Composition and Grammar)

Time Allowed : 2½ Hours ] [ Maximum Marks : 100

**ಸೂಚನೆ :** (1) ಪ್ರಶ್ನೆಪತ್ರಿಕೆಯ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಉತ್ತರಗಳು ಸ್ಪಷ್ಟವಾಗಿದ್ದು, ಕೊಟ್ಟಿರುವ ಸಾಲುಗಳ ಮಿತಿಯನ್ನು ಮೀರದಂತಿರಬೇಕು.

(3) ಬರೆಯಲು ಮತ್ತು ಅಡ್ಡಗೆರೆ ಎಳೆಯಲು **ನೀಲಿ** ಅಥವಾ **ಕಪ್ಪು** ಶಾಹಿಯನ್ನು ಬಳಸಿರಿ.

## ಭಾಗ – ಅ
## PART - A

**I.** (a) ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿರಿ : **20x1=20**

Answer the following questions :

**1.** ದೈತ್ಯ – ಪದದ ಅರ್ಥ:
(ಅ) ಜನರು (ಆ) ದೇವರು (ಇ) ಮಕ್ಕಳು (ಈ) ರಾಕ್ಷಸ

**2.** 'ಉಪಕಾರ' – ಪದದ ವಿರುದ್ಧ ಪದ ಬರೆಯಿರಿ.

**3.** 'ನಾವ್ಯಾಕೆ' – ಈ ಪದದ ಗ್ರಾಂಥಿಕ ರೂಪವನ್ನು ಬರೆಯಿರಿ.

**4.** 'ಆಕಾಶ' – ಪದದ ತದ್ಭವ ರೂಪ :
(ಅ) ಅಗಸ (ಆ) ಆಗಸ (ಇ) ಅಮೃತ (ಈ) ಆಕಾಸ

**5.** ಆಶ್ಚರ್ಯ – ಪದಕ್ಕೆ ಸ್ವಂತ ವಾಕ್ಯ ರಚಿಸಿ.

**6.** ಮಹಾರಾಷ್ಟ್ರದಿಂದ ಜೋಶಿಯವರು ಹುಟ್ಟೂರಿಗೆ ಬಂದಿದ್ದರು – ಗೆರೆ ಎಳೆದ ಪದದಲ್ಲಿರುವ ವಿಭಕ್ತಿ ಪ್ರತ್ಯಯ ಗುರುತಿಸಿ ಬರೆಯಿರಿ.

**7.** ಶುದ್ಧ ವೈರಿಗಳು ಯಾರು – ಈ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.

**8.** ಪಿಲಾತನು ಯೇಸುವಿಗೆ ಮರಣದಂಡನೆ ವಿಧಿಸಿದನು – ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ.

[ Turn over

9. ಸಿರಾಕ್ಯೂಸನ್ನು 'ಹೀರೊ' ಎಂಬ ರಾಜ ಆಳಿದಳು – ಈ ವಾಕ್ಯದಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ.

10. ಗದ್ಯ ಶಾಸ್ತ್ರವು ಪದ್ಯಗಳೆರಡಕ್ಕೂ ವ್ಯಾಕರಣ ಶಾಸ್ತ್ರವಾಗಿದೆ ಸಂಬಂಧಿಸಿದೆ. – ಈ ವಾಕ್ಯವನ್ನು ಸರಿಯಾದ ಕ್ರಮದಲ್ಲಿ ಜೋಡಿಸಿರಿ.

11. ಕಣ್ವಾಶ್ರಮ – ಪದವನ್ನು ಬಿಡಿಸಿ ಬರೆದರೆ.
(ಅ) ಕಣಾ + ಆಶ್ರಮ (ಆ) ಕಣ + ಆಶ್ರಮ
(ಇ) ಕಣ + ಕಣ (ಈ) ಕಣ್ವ + ಆಶ್ರಮ

12. ಮುಕ್ಕಾಲು – ಪದದಲ್ಲಿರುವ ಸಮಾಸ.
(ಅ) ಕ್ರಿಯಾ ಸಮಾಸ (ಆ) ದ್ವಿಗು ಸಮಾಸ
(ಇ) ಕರ್ಮಧಾರಯ ಸಮಾಸ (ಈ) ದ್ವಂದ್ವ ಸಮಾಸ

13. ತ್ರಿಪದಿಯಲ್ಲಿ ಒಟ್ಟು __________ ಗಣಗಳಿರುತ್ತವೆ.
(ಅ) 12 (ಆ) 10 (ಇ) 13 (ಈ) 11

14. ಷಟ್ಪದಿ ಎಂದರೆ __________ ಸಾಲಿನ ಪದ್ಯ.
(ಅ) 4 ಸಾಲು (ಆ) 6 ಸಾಲು (ಇ) ಸಾಲಿನ ಮಿತಿಯಿಲ್ಲ (ಈ) 3 ಸಾಲು

15. 'ಶ್ರೀ ರಾಮಾಯಣ ದರ್ಶನಂ' ಎಂಬುದು ಒಂದು :
(ಅ) ಮಹಾಕಾವ್ಯ (ಆ) ಕಾದಂಬರಿ (ಇ) ನಾಟಕ (ಈ) ಕತೆ

16. ಜನಪದ ಸಾಹಿತ್ಯವನ್ನು ರಚಿಸಿದವರು :
(ಅ) ಮಹಾಕವಿಗಳು (ಆ) ಮಕ್ಕಳು
(ಇ) ನಾಟಕಕಾರರು (ಈ) ಜನಸಾಮಾನ್ಯರು

17. ಎರಡು ವಸ್ತುಗಳ ನಡುವಿನ ಪರಸ್ಪರ ಸಾದೃಶ್ಯವನ್ನು ಹೇಳುವುದು :
(ಅ) ದೀಪಕಾಲಂಕಾರ (ಆ) ಉಪಮಾಲಂಕಾರ
(ಇ) ಶ್ಲೇಷಾಲಂಕಾರ (ಈ) ರೂಪಕಾಲಂಕಾರ

18. ದು:ಖ–ದುಮ್ಮಾನ – ಈ ಪದವು :
(ಅ) ದ್ವಿರುಕ್ತಿ (ಆ) ಜೋಡಿ ಪದ
(ಇ) ಪ್ರಾಸಪದ (ಈ) ತದ್ಧಿತಾಂತ ಪದ

19. 'ಸಂದೇಹ' – ಪದದ ವಿರುದ್ಧ ಪದ :
(ಅ) ನಿರುಂದೇಹ (ಆ) ನಿಸ್ಸಂದೇಹ
(ಇ) ಸಸಂದೇಹ (ಈ) ಅಸಂದೇಹ

20. ಪ್ರಬಂಧಗಳನ್ನು ಬರೆಯುವುದರಿಂದ ವಿದ್ಯಾರ್ಥಿಗಳ ಭಾಷಾ ಪ್ರೌಢಿಮೆ :
(ಅ) ಕಡಿಮೆಯಾಗುತ್ತದೆ (ಆ) ಸಮನಾಗುತ್ತದೆ
(ಇ) ಹೆಚ್ಚಾಗುತ್ತದೆ (ಈ) ಏನು ಆಗುವುದಿಲ್ಲ

(b) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **5x2=10**
Answer the following questions :

21. ವಾಕ್ಯ ಎಂದರೇನು ? ಉದಾಹರಣೆ ನೀಡಿ.

22. ಗುಣಸಂಧಿಯ ಲಕ್ಷಣ ಬರೆದು, ಉದಾಹರಣೆ ನೀಡಿ.

23. ವಿಭಕ್ತಿ ಪ್ರತ್ಯಯ ಎಂದರೇನು ? ಕನ್ನಡದಲ್ಲಿ ಎಷ್ಟು ವಿಭಕ್ತಿಗಳಿವೆ ?

24. ಛಂದಸ್ಸು ಎಂದರೇನು ?

25. ಸಾಂಗತ್ಯದಲ್ಲಿ ಎಷ್ಟು ಸಾಲುಗಳಿವೆ ? ಒಬ್ಬ ಸಾಂಗತ್ಯ ಕವಿಯ ಹೆಸರು ತಿಳಿಸಿ.

## ಭಾಗ – ಆ
## PART - B

II. ಈ ಕೆಳಗಿನ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ, **ಹತ್ತು** ಸಾಲುಗಳಿಗೆ **ಮೀರದಂತೆ** ಉತ್ತರಿಸಿ : **4x5=20**
Answer **any four** questions, answers should **not exceed 10** lines each.

26. ಹಿರಿಯರು ಅವಮಾನಿತರಾಗುವ ಪ್ರಸಂಗಗಳಾವುವು ?

27. ಅನ್ನ ಸಮಸ್ಯೆ ಬಿಡಿಸ ಬರದ ಗಂಟು ಎಂಬ ಹೇಳಿಕೆಯನ್ನು ಸಮರ್ಥಿಸಿ.

28. ಚಂಡಮಾರುತಗಳು ದೊಡ್ಡ ಹಡಗುಗಳಿಗೂ ಯಮಪ್ರಾಯ ಹೇಗೆ ? ವಿವರಿಸಿ.

29. ಸಾಹೇಬರು ಕನ್ನಡದ ಮೇಲೆ ಹೇಗೆ ಆಸಕ್ತಿಯನ್ನು ಬೆಳೆಸಿಕೊಂಡರು ?

30. ಚಂಡಮಾರುತ ಯಾವಾಗ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ ?

31. ಹದಗೆಡುತ್ತಿರುವ ಕಾಲದ ಬಗೆಗೆ ಸಾಹೇಬರ ಅನಿಸಿಕೆಗಳೇನು ?

## ಭಾಗ – ಇ

## PART - C

III. 32. ಈ ಕೆಳಗಿನವುಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪ್ರಬಂಧ ಬರೆಯಿರಿ : 1x8=8

Write an essay on **any one** of the following :

(ಅ) ಅರಣ್ಯ ಸಂರಕ್ಷಣೆಯ ಮಹತ್ವ

(ಆ) ಭಾರತದಲ್ಲಿ ಚುನಾವಣೆಗಳು

(ಇ) ಪರಿಸರ ಮಾಲಿನ್ಯ

33. ಈ ಕೆಳಗಿನ **ಯಾವುದಾದರೂ ಒಂದನ್ನು** ಕುರಿತು ಒಂದು ಪತ್ರವನ್ನು ಬರೆಯಿರಿ. 1x8=8

Write a letter on **any one** of the following :

ಚುನಾವಣೆಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಕುರಿತು ಚುನಾವಣಾ ಆಯೋಗಕ್ಕೆ ಒಂದು ಪತ್ರ ಬರೆಯಿರಿ.

**ಅಥವಾ**

ಈ ಬಾರಿಯ ಸಾರ್ವತ್ರಿಕ ಚುನಾವಣೆಯಲ್ಲಿ ತಪ್ಪದೆ ಮತ ಹಾಕುವಂತೆ ಪ್ರೋತ್ಸಾಹಿಸಿ. ನಿಮ್ಮ ತಮ್ಮನಿಗೊಂದು ಪತ್ರ ಬರೆಯಿರಿ.

## ಭಾಗ – ಈ

## PART - D

IV. 34. ಈ ಕೆಳಗಿನ ಕತೆಯನ್ನು ಪೂರ್ಣಗೊಳಿಸಿ. ತಕ್ಕ ಶೀರ್ಷಿಕೆಯೊಂದನ್ನು ಬರೆಯಿರಿ. 1x5=5

Complete the story and give suitable title.

ಕಾಗೆಯೊಂದು ತುಂಬಾ ಬಾಯಾರಿಕೆಯಿಂದ ನೀರಿಗಾಗಿ ಹುಡುಕಾಡುತ್ತಿದ್ದಾಗ. ಒಂದು ಬಿಂದಿಗೆಯ ತಳದಲ್ಲಿ ನೀರು ಕಾಣಿಸಿತು. ಆದರೆ ಕೊಕ್ಕಿ ಎಟುಕಿಸುತ್ತಿರಲಿಲ್ಲ ಆಗ ಕಾಗೆ. . . . . . .

35. ಈ ಕೆಳಗೆ ಕೊಟ್ಟಿರುವ ಶೀರ್ಷಿಕೆಗಳಲ್ಲಿ, ಯಾವುದಾದರೊಂದಕ್ಕೆ ಎಂಟು ಸಾಲುಗಳ ಕವಿತೆಯೊಂದನ್ನು ರಚಿಸಿ. 1x5=5

Write a poem on **any one** of the given topics in eight lines :

(ಅ) ದೇವರು (ಆ) ಮಕ್ಕಳು

36. ಈ ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿ, ಸಾರಾಂಶವನ್ನು ಬರೆಯಿರಿ. 1x5=5

Summarise the poem given below :

ಅನ್ನವನ್ನು ಇಕ್ಕುವುದು ನನ್ನಿಯನು ನುಡಿಯುವುದು<br>
ತನ್ನಂತೆ ಪರರ ಬಗೆಯೊಡೆ ಕೈಲಾಸ<br>
ಬಿನ್ನಾಣವಕ್ಕು ಸರ್ವಜ್ಞ.

**37.** ಈ ಕೆಳಗಿನ ಗದ್ಯಭಾಗವನ್ನು ಓದಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ : **5x1=5**

Read the passage given below and answer the questions that follow :

ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕೆ.ವಿ. ಪುಟ್ಟಪ್ಪನವರು 29.12.1904 ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೋಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ಕುವೆಂಪುರವರು ಮಹಾ ಛಂದಸ್ಸಿನಲ್ಲಿ 'ಶ್ರೀರಾಮಾಯಣದರ್ಶನಂ' ಎಂಬ ಮಹಾಕಾವ್ಯವನ್ನು ಬರೆದಿದ್ದಾರೆ. 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮಲೆಗಳಲ್ಲಿ ಮಧುಮಗಳು' ಅವರ ಸುಪ್ರಸಿದ್ಧ ಕಾದಂಬರಿಗಳು. ನವಿಲು, ಕೋಗಿಲೆ, ಪಕ್ಷಿಕಾಶಿ ಅವರ ಪ್ರಖ್ಯಾತ ಕವನ ಸಂಕಲನಗಳು. ಕವಿತೆ, ಸಣ್ಣಕತೆ, ಕಾದಂಬರಿ, ಮಹಾಕಾವ್ಯ, ನಾಟಕ, ಜೀವನಚರಿತ್ರೆ, ವೈಚಾರಿಕ ಲೇಖನ, ವಿಮರ್ಶೆ ಮುಂತಾದ ವಿವಿಧ ಸಾಹಿತ್ಯ ಕ್ಷೇತ್ರಗಳಿಗೆ ಕುವೆಂಪುರವರು ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರು 1994 ರಲ್ಲಿ ನಿಧನರಾದರು.

**ಪ್ರಶ್ನೆಗಳು :**

(a) ಕುವೆಂಪುರವರ ಪೂರ್ಣ ಹೆಸರು ?

(b) ಕುವೆಂಪುರವರ ಪೂರ್ಣ ವಿಳಾಸ ತಿಳಿಸಿ.

(c) ಕುವೆಂಪುರವರ ಮಹಾಕಾವ್ಯ ಯಾವುದು ?

(d) ಕುವೆಂಪುರವರ ಕವನ ಸಂಕಲನಗಳು ಯಾವುವು ?

(e) ಕುವೆಂಪುರವರ ಪ್ರಸಿದ್ಧ ಕಾದಂಬರಿಗಳು ಯಾವುವು ?

**38.** (a) ಈ ಕೆಳಗೆ ಕೊಟ್ಟಿರುವ ಘಟನೆಯನ್ನು ಓದಿ, ಅದರ ಕುರಿತು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿರಿ : **3x1=3**

Read the following scenario and answer the questions that follow :

ಜನಪದ ಸಾಹಿತ್ಯವು ನಮ್ಮ ಜೀವನದ ಉಸಿರು. ಈ ಸಾಹಿತ್ಯವನ್ನು ರಚಿಸಿದವರು ಜನಸಾಮಾನ್ಯರು. ಅವರ ನೋವು–ನಲಿವುಗಳು, ಸುಖ–ದು:ಖಗಳು ಇವುಗಳ ವಿಶಿಷ್ಠ ಅನುಭಾವಗಳ ಕನ್ನಡಿಯಾಗಿ ನಿಂತಿದೆ ಜನಪದ ಸಾಹಿತ್ಯ. ಜನಪದ ಸಾಹಿತ್ಯದಲ್ಲಿ ಕತೆಗೆ ಪ್ರಮುಖ ಸ್ಥಾನವಿದೆ. ಈ ಜನಪದ ಕತೆಗಳನ್ನು ನಮ್ಮ ಜನ ಪುಟ್ಟಮಕ್ಕಳಿಗೆ, ಕಿರಿಯರಿಗೆ ಅತ್ಯಂತ ಆಸಕ್ತಿಯಿಂದ ಹೇಳುತ್ತಿದ್ದರು. ಜನಪದ ಕತೆಗಾರನಿಗೆ ತನ್ನ ಸುತ್ತ ಇರುವ ಸಮಾಜ, ಸುತ್ತಮುತ್ತಲಿನ ಪ್ರಾಣಿ–ಪಕ್ಷಿಗಳೇ ಕಥಾವಸ್ತುಗಳು.

**ಪ್ರಶ್ನೆಗಳು :**

(i) ಜನಪದ ಸಾಹಿತ್ಯದ ರಚನಕಾರರು ಯಾರು ?

(ii) ಜನಪದ ಸಾಹಿತ್ಯದ ಕಥಾವಸ್ತುಗಳು ಯಾವುವು ?

(iii) ಜನಪದ ಸಾಹಿತ್ಯದಲ್ಲಿ ಯಾವುದಕ್ಕೆ ಪ್ರಮುಖ ಸ್ಥಾನವಿದೆ ?

(b) ಈ ಕೆಳಗೆ ಕೊಟ್ಟಿರುವ ಸಂದರ್ಭವನ್ನು ಊಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ : **2x1=2**

Imagine the following situation and answer the questions accordingly :

ರೋಗಿಯೊಬ್ಬರು ತುಂಬಾ ಕೊಳಕು ಸ್ಥಿತಿಯಲ್ಲಿ ಬೀದಿಯಲ್ಲಿ ನಡುಗುತ್ತಾ ಬಿದ್ದಿದ್ದರು. ಸಹಾಯಕ್ಕಾಗಿ ಅಂಗಲಾಚುತ್ತಿದ್ದನು. ಆ ದಾರಿಯಲ್ಲಿ ಹಲವು ಜನರಿದ್ದರೂ, ಸಹಕರಿಸಲು ಒಬ್ಬರೂ ಮುಂದೆ ಬರಲಿಲ್ಲ.

(i) ಇಂತಹ ಸಂದರ್ಭದಲ್ಲಿ ನೀನು ಹೇಗೆ ವರ್ತಿಸುವೆ ?

(ii) ಇತರರಿಗೆ ಸಹಕರಿಸುವುದರಿಂದ ಪ್ರಕಟವಾಗುವ ಗುಣಗಳು ಯಾವುವು ?

[ Turn over

**39.** (a) ಈ ಕೆಳಗಿನ ಸಾಲುಗಳಲ್ಲಿರುವ ಆಂಗ್ಲ ಪದಗಳಿಗೆ ತಕ್ಕ ಕನ್ನಡ ಪದಗಳನ್ನು ಬರೆಯಿರಿ. **1x2=2**

Replace the following English words with suitable Kannada words.

ಮಕ್ಕಳಿಗೆ ತುಂಬಾ ವರ್ಕ್ ಕೊಡಬಾರದು. ಬಟ್ ಅವರನ್ನು ರೆಸ್ಟ್‌ಲೂ ಬಿಡಬಾರದು. ರಚನಾತ್ಮಕ ಕೆಲಸಗಳಿಗೆ ಯೂಸ್ ಮಾಡಿಕೊಳ್ಳಬೇಕು.

(b) ಕೆಳಗೆ ಕೊಟ್ಟಿರುವ ಅರಬ್ ಸಂಖ್ಯೆಗಳಿಗೆ ಸೂಕ್ತ ಕನ್ನಡ ಅಂಕಿಗಳನ್ನು ಬರೆಯಿರಿ. **1x2=2**

Translate the following Arabic numerals into Kannada numerals.

73, 24, 189, 5604

**40.** (a) ಕನ್ನಡಕ್ಕೆ ಭಾಷಾಂತರಿಸಿರಿ : **1x3=3**

Translate the following into Kannada :

Books are most trusted of friends. Our friends may change or die ; but our books are patiently waiting to talk to us. They are never cross, peevish or unwilling to converse. No wonder a reader becomes a book-lover.

(b) ಈ ಕೆಳಗಿನ ಆಂಗ್ಲ ಗಾದೆಗಳಿಗೆ ಸರಿಯಾದ ಕನ್ನಡ ಗಾದೆಗಳನ್ನು ಬರೆಯಿರಿ : **1x2=2**

Translate the following English Proverbs into suitable Kannada proverbs :

(i) Face is the index of the mind.

(ii) Work is worship.

**- o O o -**